ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಯತೀಶ್ ಉಳ್ಳಾಲ್ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06–06–2023 ರ ಮಂಗಳವಾರದಂದು ಅಪರಾಹ್ನ 2.00 ಗಂಟೆಗೆ ನಡೆದ ಪ್ರಾಧಿಕಾರದ 56 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ
4. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ಗೈರು ಹಾಜರಾದವರು

1. ಸಹಾಯಕ ಅಭಿಯಂತರರು, ಪುರಸಭೆ, ಕುಶಾಲನಗರ.

ವಿಷಯ ಸಂಖ್ಯೆ(01): ದಿನಾಂಕ: 21–03–2023 ರಂದು ನಡೆದ ಪ್ರಾಧಿಕಾರದ 55ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 21–03–2023 ರಂದು ನಡೆದ ಪ್ರಾಧಿಕಾರದ 55ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 55ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಯಾವುದೇ ಆಕ್ಷೇಪಣೆ ವ್ಯಕ್ತವಾಗದ ಕಾರಣ ಸದರಿ ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಮಾರ್ಚ್ 2023, ಏಪ್ರಿಲ್ 2023 ಮತ್ತು ಮೇ 2023 ರ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಮಾರ್ಚ್ 2023, ಏಪ್ರಿಲ್ 2023 ಮತ್ತು ಮೇ 2023 ರ ಮಾಹೆಗಳ ಜಮಾ & ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಕ್ರ.ಸಂ.	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು ರೂ.ಗಳಲ್ಲಿ	ಮಾಹೆಯ ಜಮಾ. ರೂ.ಗಳಲ್ಲಿ	ಒಟ್ಟು	ಮಾಹೆಯ ಖರ್ಚು. ರೂ.ಗಳಲ್ಲಿ	ಉಳಿಕೆ ಶಿಲ್ಕು ರೂ.ಗಳಲ್ಲಿ
1	2	3	4	5	6	7
ಮಾರ್ಚ್–2023						
1	ಉಳಿತಾಯ ಶುಲ್ಕದ ಖಾತೆ	29,01,308=50	49,429=00	29,50,737=50	94,587=00	28,56,150=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,00,794=00	5,664=00	2,06,458=00	–	2,06,458=00
3	ಸೆಸ್ ಶುಲ್ಕದ ಖಾತೆ	1,69,879=00	3,664=00	1,73,543=00	–	1,73,543=00

ಏಪ್ರಿಲ್–2023						
1	ಉಳಿತಾಯ ಶುಲ್ಕದ ಖಾತೆ	28,56,150=50	3,54,630=00	32,10,780=50	90,652=00	31,20,128=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,06,458=00	72,750=00	2,79,208=00	–	2,79,208=00
3	ಸೆಸ್ ಶುಲ್ಕದ ಖಾತೆ	1,73,543=00	29,450=00	2,02,993=00	–	2,02,993=00
ಮೇ–2023						
1	ಉಳಿತಾಯ ಶುಲ್ಕದ ಖಾತೆ	31,20,128=50	21,360=00	31,41,488=50	1,48,142=00	29,93,346=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,79,208=00	1050=00	2,80,258=00	–	2,80,258=00
3	ಸೆಸ್ ಶುಲ್ಕದ ಖಾತೆ	2,02,993=00	910=00	2,03,903=00	–	2,03,903=00

ನಿರ್ಣಯ: ಮಾಚ್ 2023, ಏಪ್ರಿಲ್ 2023 ಮತ್ತು ಮೇ 2023 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ(03): ದಿನಾಂಕ: 21–03–2023 ರಿಂದ 05–06–2023 ರವರೆಗೆ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಸ್ಥಿರೀಕರಿಸಲು ಮಂಡಿಸಿರುವ ಬಗ್ಗೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 23/7 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಕೆ.ಬಿ. ಚಂದ್ರಶೇಖರ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 23/7 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 387887 ದಿನಾಂಕ: 27–07–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ದಕ್ಷಿಣ ದಿಕ್ಕಿನಲ್ಲಿ 5.50ಮೀ ಅಗಲದ ಸಂಪರ್ಕ ರಸ್ತೆಗೆ ಹೊಂದಿಕೊಂಡಿದ್ದು, 9.0ಮೀ ಅಗಲೀಕರಣಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 170.89 ಚ.ಮೀ (ಶೇ. 84.46%) ಮತ್ತು ರಸ್ತೆ ವಿಸ್ತರಣೆಗಾಗಿ 31.45 ಚ.ಮೀ (ಶೇ. 15.54%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 23–03–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಗ್ರಾಮದ ಸ.ನಂ. 51/10 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀಮತಿ ಹೇಮಾವತಿ**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 51/10 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 424005 ದಿನಾಂಕ: 03–03–2023 ರಲ್ಲಿ ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ ಹಾಲಿ 20.0ಮೀ ಅಗಲದ ರಾಷ್ಟ್ರೀಯ ಹೆದ್ದಾರಿಯಿಂದ ಸಂಪರ್ಕ ಹೊಂದಿದ್ದು, 30.0ಮೀ ಅಗಲೀಕರಣಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಾಣಿಜ್ಯ ಉಪಯೋಗಕ್ಕಾಗಿ 132.24 ಚ.ಮೀ (ಶೇ.63.99%), ವಾಹನ ನಿಲುಗಡೆಗಾಗಿ 11.70 ಚ.ಮೀ (ಶೇ.5.67%), ಉದ್ಯಾನವನಕ್ಕಾಗಿ 20.70 ಚ.ಮೀ (10.1%) ಮತ್ತು ರಸ್ತೆ ವಿಸ್ತರಣೆಗಾಗಿ 42.00 ಚ.ಮೀ (ಶೇ.20.33%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 04–03–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು

ವಿಷಯ ಸಂಖ್ಯೆ(4): ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಕಛೇರಿಯ ಉಪಯೋಗಕ್ಕೆ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನವನ್ನು ಹೊಂದುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕೆಲಸಕ್ಕೆ ಯಾವುದೇ ವಾಹನ ಸೌಲಭ್ಯ ಇಲ್ಲದೆ ಇರುವುದರಿಂದ ಸ್ಥಳ ಪರಿಶೀಲನೆಗೆ ಸಾರ್ವಜನಿಕರು ತರುವ ವಾಹನದ ಮೇಲೆ ಅವಲಂಬಿತವಾಗಬೇಕಾಗಿರುತ್ತದೆ. ಹಾಗಾಗಿ ಸ್ಥಳ ಪರಿಶೀಲನೆಗೆ ಹಾಗೂ ಈ ಕಛೇರಿಯ ಇತರೆ ಕೆಲಸಗಳಿಗೆ ಅನುಕೂಲವಾಗುವಂತೆ ಸರ್ಕಾರದ ಪೂರ್ವಾನುಮತಿಯೊಂದಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಸೌಲಭ್ಯ ಹೊಂದಲು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಈ ವಿಷಯವನ್ನು ಈ ಹಿಂದೆ ದಿನಾಂಕ: 02–07–2021 ರಂದು ನಡೆದ 44ನೇ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಪ್ರಾಧಿಕಾರದ ಸಭೆಯು ಮುಂದಿನ ಸಭೆಯಲ್ಲಿ ಚರ್ಚಿಸಲು ನಿರ್ಣಯಿಸಲಾಗಿರುತ್ತದೆ. ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ.30 ಶಿವಾನಿ 2019, ಬೆಂಗಳೂರು, ದಿನಾಂಕ: 31–03–2022 ರನ್ವಯ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಪಡೆಯಲು ಬಾಡಿಗೆ ದರಗಳನ್ನು ಹಾಗೂ ಕಾಲಮಿತಿಗಳನ್ನು ನಿಯಮಾನುಸಾರ ಪಾಲಿಸಬೇಕಾಗಿರುತ್ತದೆ ಹಾಗೂ ಸದರಿ ಸಭೆಯಿಂದ ವಾಹನ ಸೌಲಭ್ಯಕ್ಕೆ ಅನುಮತಿ ದೊರೆತಲ್ಲಿ, ಸರ್ಕಾರದ ಪೂರ್ವಾನುಮತಿ ಪಡೆದು ಕಛೇರಿಯ ಉಪಯೋಗಕ್ಕೆ ವಾಹನವನ್ನು ಹೊರಗುತ್ತಿಗೆಯ ಮೇಲೆ ಹೊಂದಬಹುದಾಗಿರುತ್ತದೆ.

ಆದರೆ ಈ ಅನುಮತಿ ಪ್ರಕ್ರಿಯೆಗೆ ಸಮಯವಕಾಶ ಬೇಕಾಗಬಹುದಾಗಿರುತ್ತದೆ ಎಂಬ ಈ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ಸರ್ಕಾರದ ಪೂರ್ವಾನುಮತಿ ಪಡೆದು ಕಛೇರಿಯ ಉಪಯೋಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೌಲಭ್ಯವನ್ನು ಹೊಂದಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(5): ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸ ನಕ್ಷೆಗಳಲ್ಲಿನ ನಾಗರೀಕಸೌಲಭ್ಯ ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ನೊಂದಾಯಿಸಿ ಕೊಡುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಯಿಂದ ಈ ಹಿಂದೆ ಅನುಮೋದನೆಗೊಂಡಿರುವ ವಸತಿ ವಿನ್ಯಾಸ ನಕ್ಷೆಗಳಲ್ಲಿನ ನಾಗರೀಕ ಸೌಲಭ್ಯದ ಜಾಗಗಳನ್ನು ಬಡಾವಣೆ ಮಾಲೀಕರು ಆಯಾಯ ಗ್ರಾಮ ಪಂಚಾಯಿತಿಗಳ ಹೆಸರಿಗೆ ಮತ್ತು ಪಟ್ಟಣ ಪಂಚಾಯಿತಿಯ ಹೆಸರಿಗೆ ಸಬ್‌ರಿಜಿಸ್ಟ್ರರವರ ಕಛೇರಿಯಲ್ಲಿ ನೊಂದಣಿ ಮಾಡಿ ಹಸ್ತಾಂತರ ಮಾಡಿರುತ್ತಾರೆ. ಆದರೆ ಸರ್ಕಾರದ ಅಧಿಸೂಚನೆ ಸಂ:ವ್ಯಶಾಇ 24 ಶಾಸನ 2015 ಬೆಂಗಳೂರು. ದಿನಾಂಕ:10–09–2015 ರಂತೆ ನಾಗರೀಕ ಸೌಲಭ್ಯದ ಜಾಗಗಳನ್ನು ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿಗೆ ನೋಂದಣಿ ಮಾಡಬೇಕಾಗಿರುತ್ತದೆ. ಈ ಬಗ್ಗೆ ಸದರಿ ಗ್ರಾಮಪಂಚಾಯಿತಿಗಳಿಗೆ ಹಾಗೂ ಪಟ್ಟಣ ಪಂಚಾಯಿತಿಗೆ ಈಗಾಗಲೇ ಹಲವು ಬಾರಿ ಪತ್ರ ಬರೆದು ನಾಗರೀಕ ಸೌಲಭ್ಯದ ನಿವೇಶನಗಳನ್ನು ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿಗೆ ಈ ಕೂಡಲೇ ನೋಂದಣಿ ಮಾಡಿಕೊಡಬೇಕೆಂದು ಸೂಚಿಸಿರುವುದು ಕಂಡುಬಂದಿದೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿದಂತೆ ವಿನ್ಯಾಸ ಅನುಮೋದನೆ ಮಾಡುವ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆ ನಕ್ಷೆಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಗುರುತಿಸಿರುವ ನಿವೇಶನಗಳನ್ನು ಪ್ರಾಧಿಕಾರಕ್ಕೆ ನೋಂದಾಯಿಸಿ ಹಸ್ತಾಂತರಿಸಬೇಕಿರುತ್ತದೆ. ಅದರೆ ಹಲವಾರು ನಾಗರೀಕ ಸೌಲಭ್ಯ ನಿವೇಶನಗಳನ್ನು ಈ ಹಿಂದೆ ಸ್ಥಳೀಯ ಸಂಸ್ಥೆ/ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿರುವುದು ಕಂಡುಬಂದಿದೆ. ಸದರಿ ನಿವೇಶನಗಳನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಈಗಾಗಲೇ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಮೂರು ಬಾರಿ (ದಿನಾಂಕ: 05–05–2017, 01–08–2017 ಮತ್ತು 11–10–2021) ಹಾಗೂ ಗ್ರಾಮಪಂಚಾಯಿತಿಗಳಿಗೆ ಎರಡು ಬಾರಿ (01–08–2017 ಮತ್ತು 12–10–2021) ಪತ್ರ ಬರೆಯಲಾಗಿದ್ದರೂ ಸಹ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದು ಕಂಡುಬಂದಿರುವುದಿಲ್ಲ. ಹಾಗಾಗಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಸೂಚಿಸಬಹುದಾಗಿದ್ದು ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂ:ವ್ಯಶಾಇ 24 ಶಾಸನ 2015 ಬೆಂಗಳೂರು. ದಿನಾಂಕ:10–09–2015 ರನ್ವಯ ದಿನಾಂಕ: 10–09–2015 ರಿಂದ ಇಲ್ಲಿಯವರೆಗೆ ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಅಂತಿಮ ಅನುಮೋದನೆಯನ್ನು ಪಡೆದುಕೊಂಡಿರುವ ಯಾವುದೇ ವಿನ್ಯಾಸ ನಕ್ಷೆಗಳಲ್ಲಿ ಕಂಡುಬರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಬಂಧಪಟ್ಟ ಮಾಲೀಕರು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸದೇ ಕುಶಾಲನಗರ ಪುರಸಭೆ ಹಾಗೂ ಗ್ರಾಮಪಂಚಾಯಿತಿಗಳಿಗೆ ಹಸ್ತಾಂತರಿಸಿದ್ದಲ್ಲಿ, ಅಂತಹ ಸಿ.ಎ. ನಿವೇಶನಗಳನ್ನು ಗುರುತಿಸಿ ಕುಶಾಲನಗರ ಪುರಸಭೆ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಪತ್ರ ಬರೆದು ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿಗೆ

ಹಸ್ತಾಂತರಿಸಿಕೊಳ್ಳಬೇಕಾಗುತ್ತದೆ ಹಾಗೂ ಇದರ ಬಗ್ಗೆ ಮುಖ್ಯಾಧಿಕಾರಿಗಳೊಂದಿಗೆ ಚರ್ಚಿಸಲು ಮತ್ತೊಂದು ಸಭೆಯನ್ನು ನಿಗಧಿಪಡಿಸಲಾಗುವುದು ಎಂದು ಅಧ್ಯಕ್ಷರು ಹೇಳುತ್ತಾರೆ. ನಾಗರೀಕ ಸೌಲಭ್ಯ ನಿವೇಶನಗಳನ್ನು ನಮ್ಮ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ನಿರ್ಧರಿಸಿರುವುದು ಇದೇ ಸರಿಯಾದ ಸಮಯವೆಂದು ನಾಮನಿರ್ದೇಶಿತ ಸದಸ್ಯರು ಅವರ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಇದೇ ವಿಚಾರವಾಗಿ ಈ ಹಿಂದೆ ಕುಶಾಲನಗರ ಪುರಸಭೆ ಹಾಗೂ ಗ್ರಾಮಪಂಚಾಯಿತಿಗಳಿಗೆ ಬರೆದ ಪತ್ರಗಳನ್ನು ಉಲ್ಲೇಖಿಸಿ ಮತ್ತೊಂದು ಪತ್ರ ಬರೆದು ನಾಗರೀಕ ಸೌಲಭ್ಯ ನಿವೇಶನಗಳನ್ನು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(6): ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ನಿರ್ಮಾಣಗಳ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡುವ ಬಗ್ಗೆ.

ಟಿಪ್ಪಣಿ: ದಿನಾಂಕ:03–06–2023 ರಂದು ಉಪವಿಭಾಗಾಧಿಕಾರಿಗಳು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ನಿರ್ಮಾಣಗಳ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ನೀಡಬೇಕೆಂದು ಮೌಖಿಕವಾಗಿ ಸೂಚಿಸಿರುತ್ತಾರೆ ಹಾಗೂ ಕುಶಾಲನಗರ ವ್ಯಾಪ್ತಿಯಲ್ಲಿ ಕಂಡುಬರುವ ಬಹುನಿವೇಶನ ವಿನ್ಯಾಸಗಳ ಜಮೀನಿನ ಮುಂದೆ ಸೂಚನಾ ಫಲಕವನ್ನು ನೆಡುವಂತೆ ತಿಳಿಸಿರುತ್ತಾರೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 149 ಮೈಅಪ್ರಾ 2008 ದಿನಾಂಕ: 24–02–2009 ರಂದು ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ರಚನೆ ಆಗಿರುವ ಬಗ್ಗೆ ಆದೇಶಿಸಿರುತ್ತಾರೆ. ಆದರಂತೆ ಮೇಲ್ಕಂಡ ದಿನಾಂಕದಿಂದ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಒಳಪಡುವ ಯಾವುದೇ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ, ಕಟ್ಟಡ ಪರವಾನಗಿ ಹಾಗೂ ವಿನ್ಯಾಸ ನಕ್ಷೆಗಳ ಅನುಮೋದನೆಯನ್ನು ನಮ್ಮ ಈ ಪ್ರಾಧಿಕಾರದಿಂದ ಪಡೆಯಬೇಕಾಗಿರುತ್ತದೆ. ಅದಲ್ಲದೇ ಕರ್ನಾಟಕ ಸರ್ಕಾರದ ದಿನಾಂಕ: 16–06–2020 ರ ಸುತ್ತೋಲೆ ಸಂ: ನಅಇ 105 ಮೈಅಪ್ರಾ 2020 ರ ಪ್ರಕಾರ ಯೋಜನಾ ಪ್ರಾಧಿಕಾರಗಳ ತಮ್ಮ ವ್ಯಾಪ್ತಿಯಲ್ಲಿ ಅನಧಿಕೃತ ವಿನ್ಯಾಸಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿಯಮಿತವಾಗಿ ಪ್ರತಿ 15 ದಿನಗಳಿಗೊಮ್ಮೆ ಸ್ಥಳಪರಿಶೀಲನೆ ಕೈಗೊಳ್ಳುವಂತೆ ಹಾಗೂ ಯಾವುದಾದರೂ ಅನಧಿಕೃತ ಬೆಳವಣಿಗೆ ಕಂಡುಬಂದಲ್ಲಿ, ಕೆ.ಟಿ.ಸಿ.ಪಿ ಕಾಯ್ದೆ 1961 ಅನ್ವಯ ಕಟ್ಟುನಿಟ್ಟಾಗಿ ಕ್ರಮಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಒಂದು ವೇಳೆ ಕೃಷಿ ಜಮೀನಿನಲ್ಲಿ ಅನಧಿಕೃತ ಬೆಳವಣಿಗೆಗಳು ಬಂದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಸದಸ್ಯ ಕಾರ್ಯದರ್ಶಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ಸೂಚಿಸಿದೆ. ಹೀಗಿರುವಾಗ ಅನಧಿಕೃತ ಬೆಳವಣಿಗೆಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಲಾಗಿದ್ದು, ಇದಕ್ಕೆ ಕ್ರಮಕೈಗೊಳ್ಳುವ ಸಲುವಾಗಿ ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಅದಲ್ಲದೆ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ಮತ್ತು ಕಟ್ಟಡ ನಿರ್ಮಾಣಗಳ ಬಗ್ಗೆ ದಿನಾಂಕ: 10–12–2022 ರಂದು ಈಗಾಗಲೇ **"ಶಕ್ತಿ"** ದೈನಂದಿನ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ನೀಡಲಾಗಿರುತ್ತದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದ್ದು, ಕುಶಾಲನಗರದಲ್ಲಿ ಕಂಡುಬರುತ್ತಿರುವ ಅನಧಿಕೃತ ಬಡಾವಣೆ ಬೆಳವಣಿಗೆಯನ್ನು ತಡೆಗಟ್ಟಲು ಸದರಿ ವಿಚಾರದ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲು ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ

ಒಳಪಡುವ ಗುಡ್ಡೆಹೊಸೂರು ಗ್ರಾಮಪಂಚಾಯಿತಿ, ಕೂಡುಮಂಗಳೂರು ಗ್ರಾಮಪಂಚಾಯಿತಿಗಳಿಗೆ ಹಾಗೂ ಕುಶಾಲನಗರ ಪುರಸಭೆಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರ ಬರೆಯಬೇಕೆಂದು ನಿರ್ಣಯಿಸಲಾಯಿತು. ಅದರಂತೆ ಅನಧಿಕೃತ ಬಡಾವಣೆಗಳ ನಿರ್ಮಾಣದ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ಈ ಕಛೇರಿಗಳ ಮುಂದೆ ಪ್ರಕಟಣಾ ಫಲಕವನ್ನು ಹಾಕಬೇಕೆಂದು ತೀರ್ಮಾನಿಸಲಾಯಿತು. ಅದಲ್ಲದೆ, ಕುಶಾಲನಗರ ವ್ಯಾಪ್ತಿಯಲ್ಲಿ ಕಂಡುಬಂದಿರುವ ಅನಧಿಕೃತ ಬಡಾವಣೆಗಳನ್ನು ಪಟ್ಟಿ ಮಾಡಿ ಅದರ ವರದಿಯನ್ನು ಮುಖ್ಯಾಧಿಕಾರಿಗಳಿಗೆ ಹಾಗೂ ಮಾಹಿತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(7): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ರಿಟ್ ಅರ್ಜಿ ಸಂಖ್ಯೆ: 5656/2022 ಮತ್ತು 18340/2022 (LB-RES) ಸಂಬಂಧಿಸಿದಂತೆ ಚರ್ಚೆ

ಟಿಪ್ಪಣಿ: ಶ್ರೀ ಕೆ.ಎಂ. ಜಗದೀಶ್ ಮತ್ತು ಇತರರು ಕುಶಾಲನಗರ ಯೋಜನಾ ಪ್ರಾಧಿಕಾರವನ್ನು ಹಾಗೂ ಸದಸ್ಯ ಕಾರ್ಯದರ್ಶಿಯನ್ನು 1 ಮತ್ತು 2ನೇ ಪ್ರತಿವಾದಿಯಾಗಿಸಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿರುತ್ತಾರೆ.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕುಶಾಲನಗರ ಪುರಸಭೆಯ ಮುಖ್ಯಾಧಿಕಾರಿಗಳು, ನಾಮನಿರ್ದೇಶಿತ ಸದಸ್ಯರು ಸದರಿ ದಾವೆಯ ಬಗ್ಗೆ ಅಧ್ಯಕ್ಷರಿಗೆ ವಿವರಿಸಿದರು. ಈ ದಾವೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದು. ಪ್ರಸ್ತುತ ಪರಿಸ್ಥಿತಿಯನ್ನು ತಿಳಿಯಲು ಸದಸ್ಯಕಾರ್ಯದರ್ಶಿಯವರಿಗೆ ವರದಿ ನೀಡುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.

(ಆ): ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ಕೋರಿ ಸಲ್ಲಿಸುವ ಅರ್ಜಿಗಳ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ಕೋರಿ ಸಲ್ಲಿಸುವ ಅರ್ಜಿಗಳ ಪೈಕಿ ಹಲವಾರು ಪ್ರಸ್ತಾವನೆಗಳಲ್ಲಿ ಜಮೀನುಗಳ ವಿಸ್ತೀರ್ಣವು 1 ಎಕರೆಗಿಂತ ಕಡಿಮೆ ಇರುವುದು ಕಂಡುಬಂದಿರುತ್ತದೆ. ಮೂಲ ಸರ್ವೆ ನಂಬರಿನ ಮಾಲೀಕತ್ವದ ಬದಲಾವಣೆ ಹಾಗೂ ಪೋಡಿ ಆಗುವುದರಿಂದ, ಬಹುನಿವೇಶನ ವಿನ್ಯಾಸ ನಕ್ಷೆಯಲ್ಲಿ ಪ್ರಾಧಿಕಾರಕ್ಕೆ ಹಾಗೂ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಬೇಕಾಗಿರುವ ನಾಗರೀಕ ಸೌಲಭ್ಯ ಹಾಗೂ ಉದ್ಯಾನವನ/ಬಯಲುಜಾಗಗಳ ವಿಸ್ತೀರ್ಣವು ತಪ್ಪುತ್ತಿದ್ದು, ನಗರ ಯೋಜನಾ ತತ್ವಗಳ ಉಲ್ಲಂಘನೆಯನ್ನು ಕಾಣಬಹುದಾಗಿರುತ್ತದೆ. ಕುಶಾಲನಗರ ವಲಯ ನಿಯಮಾವಳಿಯ ಪ್ರಕಾರ ಯಾವುದೇ ವಿಸ್ತೀರ್ಣದ ಭೂಮಿಯನ್ನು ಏಕವಿನ್ಯಾಸ ನಕ್ಷೆಯಾಗಿ ಅನುಮೋದಿಸಬಹುದಾಗಿದ್ದು, ಭೂಮಾಲೀಕರುಗಳು ಸದರಿ ಪ್ರಸ್ತಾವನೆಯಂತೆ ಮುಂದೆ ತಮ್ಮ ಭೂಮಿಯನ್ನು ಬಹುನಿವೇಶನ ವಿನ್ಯಾಸ ಅನುಮೋದನೆ ಮಾಡದೇ ಪೋಡಿ ಮಾಡಿ ನಿವೇಶನಗಳನ್ನು ಮಾರಾಟ ಮಾಡುವುದು ಕಂಡುಬಂದಿರುತ್ತದೆ. ಇದರಿಂದ ರೆವಿನ್ಯೂ ಸೈಟ್‌ಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಕಾಣಬಹುದಾಗಿರುತ್ತದೆ.

ನಿರ್ಣಯ: ಈ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದು, ಭೂಮಿ ತಂತ್ರಾಂಶದ ತಹಶೀಲ್ದಾರ್‌ರವರಿಗೆ ಪತ್ರ ಬರೆದು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ಕೋರಿ ಸಲ್ಲಿಸುವ ಅರ್ಜಿಗಳ ಪ್ರಸ್ತಾವನೆಗಳಲ್ಲಿ ಜಮೀನುಗಳ ವಿಸ್ತೀರ್ಣವು 1 ಎಕರೆಗಿಂತ ಹೆಚ್ಚು ಇದ್ದು, 0.10 ಎಕರೆ ಅಥವಾ ಮೂಲ ಸರ್ವೆ ನಂಬರ್ ಅನೇಕ ಹಿಸ್ಸಾಗಳು ಆಗುತ್ತಿದ್ದಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ಗಮನಕ್ಕೆ ತರಲು ಪತ್ರ ಬರೆಯಬೇಕಾಗಿ ನಿರ್ಣಯಿಸಲಾಯಿತು. ಅದಲ್ಲದೆ ಈ

ವಿಷಯದ ಬಗ್ಗೆ ಕಂದಾಯ ನಿರೀಕ್ಷರು ಹಾಗೂ ಗ್ರಾಮಲೆಕ್ಕಿಗರ ಗಮನಕ್ಕೆ ಸಹ ತರಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಇ): ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ವಲಯ ದೃಢೀಕರಣ ಪತ್ರವನ್ನು ಕೋರುವ ಅರ್ಜಿದಾರರಿಂದ ಪರಿಶೀಲನಾ ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಅರ್ಜಿದಾರರು ತಮ್ಮ ಜಮೀನಿಗೆ ಭೂಪರಿವರ್ತನೆ ಮಾಡಿಸಿಕೊಳ್ಳುವಾಗ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅನೇಕ ಭೂಉಪಯೋಗ ವಲಯಗಳಿದ್ದು, ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡುವ ಮುನ್ನ ಅಲಿನೇಷನ್ ನಕ್ಷೆ ಅಥವಾ 11ಇ ನಕ್ಷೆಗೆ ಅರ್ಜಿ ಹಾಕುವ ಮುನ್ನ ನಮ್ಮ ಪ್ರಾಧಿಕಾರದಿಂದ ವಲಯ ದೃಢೀಕರಣ ಪತ್ರವನ್ನು ಕೋರುವ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿರುತ್ತದೆ. ಅದಲ್ಲದೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ಒಂದೇ ಸರ್ವೆ ನಂಬರ್ 2–3 ಭೂಉಪಯೋಗ ವಲಯಗಳಲ್ಲಿ ಕಂಡುಬಂದಿರುತ್ತದೆ. ಹಾಗಾಗಿ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಂತೆ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದಲ್ಲಿರುವ ವಲಯಗಳನ್ನು ಪರಿಶೀಲಿಸಿ ಅರ್ಜಿದಾರರಿಗೆ ಸಂಬಂಧಪಟ್ಟ ಜಮೀನಿನ ವಲಯದ ಅಳತೆ ಹಾಗೂ ವಿಸ್ತೀರ್ಣದ ಮಾಹಿತಿಯನ್ನು ನೀಡಬೇಕಾಗಿರುತ್ತದೆ. ಅದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಹಾಗೂ ಬಂಟ್ವಾಳ ಯೋಜನಾ ಪ್ರಾಧಿಕಾರಗಳಲ್ಲಿ ಈಗಾಗಾಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಪಾವತಿಸಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಲಯ ದೃಢೀಕರಣ ಪತ್ರವನ್ನು ನೀಡುವಾಗ ಅರ್ಜಿದಾರರಿಂದ ಪ್ರತಿ ಚದರ ಮೀಟರ್‌ಗೆ 0.25 ಪೈಸೆಯಂತೆ (ಕನಿಷ್ಟ ರೂ.100/–) ಶುಲ್ಕ ಪಾವತಿಸಿಕೊಳ್ಳುವುದು ಸಮಂಜಸವಾಗಿರುತ್ತದೆ. ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಈ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಲಯ ದೃಢೀಕರಣ ಪತ್ರವನ್ನು ನೀಡುವಾಗ ಅರ್ಜಿದಾರರಿಂದ ಪ್ರತಿ ಚದರ ಮೀಟರ್‌ಗೆ 0.25 ಪೈಸೆಯಂತೆ (ಕನಿಷ್ಟ ರೂ. 100/–) ಶುಲ್ಕ ಪಾವತಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ